ರವರು ಹೇಳಿದ್ದರ ಬಗ್ಗೆ ವಿಚಾರ ಮಾಡಿದ್ದೆ. ಜಿಲ್ಲಾ ಮಟ್ಟದ ಯೋಜನೆ ಏನಿದೆ ಅದರಲ್ಲಿ ಪಶುವೈದ್ಯ ಶಾಲೆಯನ್ನು ಕಟ್ಟುವ ಪ್ರಯತ್ನ ಮಾಡಿ ಜಿಲ್ಲಾ ಅಧಿಕಾರಿಗಳಿಗೆ ಬರೆಯುತ್ತೇನೆಂದು ಬರೆದಿದ್ದೇನೆ. ಆದಷ್ಟು ಜಾಗ್ರತೆ ಇದರ ಬಗ್ಗೆ ಕ್ರಮಕ್ಕೆಗೊಳ್ಳಲು ಪ್ರಯತ್ನ ಮಾಡುತ್ತೇನೆ.

ಸಂಡೂರು ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ

೧೪೩೬. **ಶ್ರೀ ಯು. ಭೂಪತಿ (ಸಂಡೂರು).**— ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(೧) ಸಂಡೂರು ತಾಲ್ಲೂಕಿನ ಮಾದಾಪುರ ದರೋಜಿ, ಹಳೇದರೋಜಿ ಮುಂತಾದ ಸುತ್ತಮುತ್ತಲಿನ ಗ್ರಾಮಂಗಳಲ್ಲಿ ಕರಡಿಗಳಿಂದ ಬೆಳೆಗೆ ಹಾನಿಯಾಗಿ ಮತ್ತು ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(೨) ಹಾಗಿದ್ದಲ್ಲಿ, ಅರಣ್ಯ ಇಲಾಖೆಯವರು ಇಲ್ಲಿಯವರೆಗೆ ಕರಡಿಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಮಾಡದೇ ಇರಲು ಕಾರಣಗಳೇನು ?

(೩) ಆ ಪ್ರದೇಶದ ರೈತರ ಹಾಗೂ ಅವರ ಬೆಳೆಗಳನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್. (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

(೧) ಹೌದು.

(೨) ಕರಡಿಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಮಾಡಲಾಗಿದ್ದರೂ ಸಫಲವಾಗಲಿಲ್ಲ. ಆದರೆ ಇಲಾಖೆಯು ಪ್ರಯತ್ನ ಇನ್ನೂ ನಡೆಯುತ್ತಲಿದೆ.

(೩) ಸಂಬಂಧಪಟ್ಟ ಪ್ರದೇಶದಲ್ಲಿರುವ ಅರಣ್ಯ ರಕ್ಷಕ ಸಿಬ್ಬಂದಿಗಳು ಗ್ರಾಮಗಳಿಗೆ ಕರಡಿಗಳು ಬಂದು ಹಾವಳಿ ಮಾಡದಂತೆ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆಕಸ್ಮಿಕವಾಗಿ ರೈತರ ಬೆಳೆಗಳಿಗೆ ಹಾನಿ ಉಂಟಾದ ಪಕ್ಷದಲ್ಲಿ ಕಾನೂನು ರೀತ್ಯಾ ಪರಿಹಾರ ಕೊಡಲಾಗುತ್ತದೆ.

ಶ್ರೀ ಯು. ಭೂಪತಿ.—ಇದು ನೀರಾವರಿ ಪ್ರಾಂತ್ಯದ ಪ್ರಶ್ನೆ. ಮೂರು ಹಳ್ಳಿಗಳಾದ ದರೋಜಿ, ಮಾದಾಪುರ ಮತ್ತು ಹಳೇ ದರೋಜಿ ಭಾಗದಲ್ಲಿ ರಸ್ತೆ ಇದೆ. ಪಕ್ಕದಲ್ಲಿ ದೊಡ್ಡ ಬೆಟ್ಟ ಇದೆ. ಅಲ್ಲಿ ೨೦೦ಕ್ಕೂ ಹೆಚ್ಚು ಕರಡಿಗಳು ವಾಸಿಸುತ್ತಿವೆ. ಸಂಜೆ ೫ ಗಂಟೆ ಆದ ತಕ್ಷಣ ಕರಡಿಗಳು ಇಳಿದು ನೇರವಾಗಿ ಹಳ್ಳಿಗಳ ಕಡೆ ಬರುತ್ತಿವೆ. ಹಲವಾರು ಜನರನ್ನು ಮಕ್ಕಳನ್ನು ಹೆಣ್ಣು ಮಕ್ಕಳನ್ನು ಕಡಿದಿವೆ. ಗದ್ದೆಯ ಬೆಳೆಯನ್ನು ನಾಶ ಮಾಡಿವೆ. ಕರಡಿಗಳನ್ನು ಸ್ಥಳಾಂತರಿಸುವ ಕಾರ್ಯ ಮಾಡಿದರೂ ಸಫಲವಾಗಲಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ಏನು ಕಾರ್ಯ ಮಾಡಿದಿರಿ ? ಏತಕ್ಕೆ ಸಫಲವಾಗಲಿಲ್ಲ ?

ಶ್ರೀ ಜೆ. ಎಸ್. ದೇಶ್‌ಮುಖ್.—ಕರಡಿಗಳು ಹಿಂಡು ಹಿಂಡಾಗಿ ಬರುತ್ತಿವೆ. ಅವುಗಳನ್ನು ಬಲೆ ಹಾಕಿ ಹಿಡಿಯಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅವು ಸುಮಾರು ೩-೪ ನೂರು ಇವೆ. ಅವುಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಪರಿಹಾರಧನ ಬೇಕಾದರೆ ಹೆಚ್ಚು ಕೊಡಬಹುದು.

ಶ್ರೀ ಯು. ಭೂಪತಿ.—ಕರಡಿಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ನೀವು ಅರಣ್ಯ ಇಲಾಖೆಯ ಮಂತ್ರಿಗಳಾಗಿರುವುದಕ್ಕೆ ಲಾಯಕ್ಕಿಲ್ಲ. ನೀವು ಹಿಡಿಯಲಿಲ್ಲವೆಂದರೆ ಇನ್ನು ಯಾರು ಹಿಡಿಯಬೇಕು? ಸರ್ಕಾರವೇ ಜವಾಬ್ದಾರಿ ಹೊತ್ತುಕೊಳ್ಳದಿದ್ದರೆ ಇನ್ನು ಯಾರು ಹೊತ್ತುಕೊಳ್ಳಬೇಕು?

ಅಧ್ಯಕ್ಷರು.—ಹೇಳುತ್ತಾರೆ ದಯವಿಟ್ಟು ಕೂಡ್ರಿ.

ಶ್ರೀ ಯು. ಭೂಪತಿ.—ಅರಣ್ಯ ಇಲಾಖೆ ಅಧಿಕಾರಿಗಳ ಕಡೆಯಿಂದ ಆಗುವುದಿಲ್ಲ, ಅಥವಾ ಸರ್ಕಾರದ ಕಡೆಯಿಂದ ಆಗುವುದಿಲ್ಲ ಎಂದರೆ ಯಾರ ಕಡೆಯಿಂದ ಆಗಬೇಕು? ಅಲ್ಲಿ ೩೦೦-೪೦೦ ಕರಡಿಗಳಿವೆ.

ಅಧ್ಯಕ್ಷರು.—ಸಮಾಧಾನವಾಗಿ ಕೇಳಿ.

ಶ್ರೀ ಯು. ಭೂಪತಿ —ಅರಣ್ಯ ಇಲಾಖೆಯವರು ಅರಣ್ಯದಲ್ಲಿ ದೊಡ್ಡ ಪ್ರಾಣಿಯಾದ ಆನೆಗಳನ್ನು ಕೂಡ ಸ್ಥಳಾಂತರ ಮಾಡುತ್ತಾರೆ. ಆದರೆ ಕರಡಿ ಹಿಡಿಯುವುದಕ್ಕೆ ಸಲಕರಣೆ ಇಲ್ಲವೆ ? ಅದನ್ನು ಹಿಡಿಯುವ ಕೆಲಸ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಭೂಪತಿಯವರೇ, ಯಾಕೆ ಹೀಗೆ ಮಾಡ್ತೀರಿ ?

ಶ್ರೀ ಯು. ಭೂಪತಿ.—ನಮಗೆ ನೋವಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಆಯೋಗ್ಯತನದ ಪರಮಾವಧಿ ಇದು. ಇದೇನು ಸದನವೋ ? ಸೊಂಡೂರು ಜಾತ್ರೆಯೋ ? ನೀತಿ, ತತ್ವದ ಮೇಲೆ ಟೀಕೆ ಮಾಡಬೇಕು.

ಶ್ರೀ ಯು. ಭೂಪತಿ.—ಸರ್ಕಾರದ ಲೋಪವನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಪದ್ಧತಿಯಲ್ಲ ಇದು.

ಶ್ರೀ ಎಂ. ರಾಮಪ್ಪ.—ಕೇಳುವುದು ತಪ್ಪೆ ? ಕೇಳಬಾರದೇ ? ಮಾನ್ಯ ನಾರಾಯಣಕುಮಾರ್ ರವರು ಮಾತ್ರ ಹೆದರಿಸಬೇಕು, ನಾವು ಹೆದರಿಸಬಾರದೆ ?

ಶ್ರೀ ಜಿ. ನಾರಾಯಣ ಕುಮಾರ್.—ಬಾಯಿಗೆ ಬಂದಹಾಗೆ ಸದನದಲ್ಲಿ ಹೇಳಬೇಕಾ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಯಾವುದೇ ಕಾಡುಪ್ರಾಣಿಯಿಂದ ಜನಜೀವನಕ್ಕೆ ತೊಂದರೆಯಾಗದಿದ್ದರೆ, ಅದನ್ನು ತಪ್ಪಿಸುವುದಕ್ಕೆ ಸರ್ಕಾರ ಕೆಲವು ವ್ಯವಸ್ಥೆ ಮಾಡಿದೆ. ಅಂದರೆ ಎಲ್ಲಾ ಕಾಡು ಪ್ರಾಣಿಗಳನ್ನು ಬಿನ್ನಟ್ಟಿಕೊಂಡು ಹೋಗುವುದಕ್ಕಾಗುವುದಿಲ್ಲ. ಜನರಿಗೆ ತೊಂದರೆಯಾಗದಂತೆ ಪ್ರಾಣಕ್ಕೆ ಹಾನಿಯಾಗದಂತೆ ರಕ್ಷಣೆ ಕೊಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಯು. ಭೂಪತಿ —ನಾನು ಕೇಳುವುದೂ ಅದೇ.

ಅಧ್ಯಕ್ಷರು.—ಆ ಪ್ರಶ್ನೆ ಮುಗಿದಿದೆ. ದಯವಿಟ್ಟು ಕೂಡ್ರಿ.

ಶ್ರೀ ಯು. ಭೂಪತಿ.—ಅವರು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ, ಕೂಡ್ರಿ.

ಶ್ರೀ ಯು. ಭೂಪತಿ.—ಜನರಿಗೆ ರಕ್ಷಣೆ ಮಾಡುವುದಕ್ಕೆ ಸ್ಥಳಾಂತರ ಮಾಡಿ ಎಂದು ಹೇಳುತ್ತಿದ್ದೇನೆ. ಸ್ಥಳಾಂತರ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಅದು ಆಗಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕರಡಿ ಸ್ಥಳಾಂತರ ಮಾಡುವುದಕ್ಕಾಗುವುದಿಲ್ಲ ಎಂದರೆ ಊರನ್ನಾದರೂ ಸ್ಥಳಾಂತರ ಮಾಡುತ್ತೀರಾ ?

ಶ್ರೀ ಯು. ಭೂಪತಿ.—ಮೂರು ಹಳ್ಳಿಗಳಲ್ಲಿ ಒಂದು ಹಳ್ಳಿ ಸ್ಥಳಾಂತರ ಮಾಡುವ ಕಾರ್ಯ ಕೂಡ ಪೆಂಡಿಂಗ್ ಇದೆ ಹತ್ತಾರು ವರ್ಷದಿಂದ ಹಳ್ಳಿ ಸ್ಥಳಾಂತರ ಮಾಡುವ ಕಾರ್ಯ ಪೆಂಡಿಂಗ್ ಇದ. ಅದೊಂದು ದೊಡ್ಡ ಸಮಸ್ಯೆಯಾಗಿದೆ. ಜನರನ್ನು ಸ್ಥಳಾಂತರ ಮಾಡುವುದಿಲ್ಲ. ಜನರಿಗೆ ಹಾನಿ ಮಾಡತಕ್ಕ ಕರಡಿಯನ್ನೂ ಸ್ಥಳಾಂತರ ಮಾಡುವುದಿಲ್ಲ ಎಂದರೆ ಯಾವರೀತಿ ರಕ್ಷಣೆ ಒದಗಿಸುತ್ತಾರೆ ಇವರು ?

ಶ್ರೀ ಜೆ. ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೆ, ಈ ತೊಂದರೆ ಇದೊಂದೇ ಜಿಲ್ಲೆಯಲ್ಲಿಲ್ಲ. ಚಿತ್ರದುರ್ಗದಲ್ಲಿ ಮತ್ತು ಬಳ್ಳಾರಿಯಲ್ಲೂ ಇದೆ. ಈಗಾಗಲೇ ಹಿಡಿಯಲಿಕ್ಕೆ ಕಲವೊಂದು ಪ್ರಯತ್ನ ಮಾಡಿದ್ದೇವೆ. ೫೦೦-೪೦೦ ಕರಡಿಗಳನ್ನು ಒಮ್ಮೆಲೆ ಹಿಡಿದುಕೊಂಡು ಹೋಗಿ ಬಿಟ್ಟರೂ ಮತ್ತೆ ಅವು ಬರುತ್ತವೆ. ಸಿಬ್ಬಂದಿಯನ್ನು ಹೆಚ್ಚು ಮಾಡಿ ಅದನ್ನು ಬಂದ್ ಮಾಡುತ್ತೇವೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಮಾನ್ಯ ಗಂಗಣ್ಣನವರು ಕೇಳಿ.

ಶ್ರೀ ಯು. ಭೂಪತಿ.—ಇದಕ್ಕೆ ಪರಿಹಾರ ಬೇಕು.

ಅಧ್ಯಕ್ಷರು.—ಇನ್ನೂ ಹೆಚ್ಚಿಗೆ ಅವಕಾಶ ಕೊಡುವುದಿಲ್ಲ, ಕೂಡ್ರಿ.

ಶ್ರೀ ಯು. ಭೂಪತಿ.—ಸರ್ಕಾರದ ಕಡೆಯಿಂದ ಆಗಂವುದಿಲ್ಲ ಎಂದರೆ ಪರಿಹಾರ ಏನು ?

ಅಧ್ಯಕ್ಷರು.—ಮಾನ್ಯ ಗಂಗಣ್ಣನವರೇ ಕೇಳಿ.

ಶ್ರೀ ಯು. ಭೂಪತಿ.—ನಾವು ಸದನದಲ್ಲಿ ಪ್ರಶ್ನೆ ಯಾತಕ್ಕೆ ಕೇಳಬೇಕು ?

ಹೊರ ರಾಷ್ಟ್ರಗಳಿಗೆ ಮುದ್ದಕನಹಳ್ಳಿಯಲ್ಲಿರುವ ಬೆಲೆಬಾಳುವ ಕಲ್ಲುಗಳ ಮಾರಾಟ

೮೩೨ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಅರಣ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುದ್ದಕನಹಳ್ಳಿ ಗ್ರಾನೈಟ್ ಕ್ವಾರಿಯನ್ನು ಸರ್ಕಾರದವರು ಯಾರಿಗೆ ಯಾ ಆಧಾರದ ಮೇಲೆ ಎಷ್ಟು ಅವಧಿಗೆ ವಹಿಸಿಕೊಟ್ಟಿದ್ದಾರೆ. ಮತ್ತು ವಹಿಸಿಕೊಟ್ಟಿರುವ ವಿಸ್ತೀರ್ಣವೆಷ್ಟು ?

ಆ) ಸದರಿ ಕ್ವಾರಿಯಲ್ಲಿ ಉತ್ಕೃಷ್ಟವಾದ ಗುಣ ಮಟ್ಟದ ಕಲ್ಲು ಮತ್ತು ಚಪ್ಪಡಿಗಳು ಹೊರ ರಾಷ್ಟ್ರಗಳಿಗೆ ಸಾಗಾಣಿಕೆಯಾಗುತ್ತಿರುವ ವಿಷಯು ಸರ್ಕಾರದವರಿಗೆ ಗೊತ್ತಿದೆಯೆ ?

ಇ) ಈ ರೀತಿ ಹೊರ ರಾಷ್ಟ್ರಗಳಿಗೆ ಕಲ್ಲು ಮತ್ತು ಚಪ್ಪಡಿಗಳು ಯಾವಾಗಿನಿಂದ ಸಾಗಾಣಿಕೆಯಾಗಲು ಪ್ರಾರಂಭವಾಗಿದೆ ಮತ್ತು ಯಾರ ಹೆಸರಿನ ಪರವಾನಿಗೆ ಮೇರೆಗೆ ಸಾಗಾಣಿಕೆಯಾಗುತ್ತಿದೆ.

ಈ) ವರ್ಷಂ ಪ್ರತಿ ಎಷ್ಟೆಂಷ್ಟು ಪ್ರಮಾಣದಲ್ಲಿ ಹೊರ ರಾಷ್ಟ್ರಗಳಿಗೆ ಮುದ್ದಕನಹಳ್ಳಿ ಕ್ವಾರಿಯಿಂದ ಕಲ್ಲು ಮತ್ತು ಚಪ್ಪಡಿಗಳು ಸಾಗಾಣಿಕೆಯಾಗುತ್ತಿದೆ.

ಉ) ಹೊರ ರಾಷ್ಟ್ರಗಳಿಗೆ ಸದರಿ ಬಂಡೆಯಂ ಕಲ್ಲು ಚಪ್ಪಡಿಗಳು ಬಿಕರಿಯಾಗುತ್ತಿರುವ ಧರ (ಪರವಾನಿಗೆ ಮೇರೆಗೆ) ಏನು ? ಮತ್ತು ಸ್ಥಳೀಯ ಸಂಘ ಸಂಸ್ಥೆಗಳು ಕ್ಯೂಬಿಕ್ ಮೀಟರಿಗೆ ಪಡೆಯುತ್ತಿರುವ ಧರವೇನು ?

ಊ) ಸಂಘ ಸಂಸ್ಥೆಗಳಿಗೆ ನೇರವಾಗಿ ಪರವಾನಗೆ ದೊರೆಯುತ್ತಿದೆಯೇ ಹಾಗಿಲ್ಲದಿದ್ದಲ್ಲಿ ದೊರಕದಿರಲು ಕಾರಣವೇನು ?

ಅ) ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು)

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ ೧೯೬೯ರ ಮೇರೆಗೆ ಈ ಕೆಳಗೆ ವಿವರಿಸಿದಂತೆ ಒಟ್ಟು ೨೨.೫೨ ಎಕರೆ ವಿಸ್ತೀರ್ಣದಲ್ಲಿ ಲೀಸುಗಳನ್ನು ಮಂಜೂರು ಮಾಡಲಾಗಿದೆ.

	ಹೆಸರು	ಅವಧಿ	ವಿಸ್ತೀರ್ಣ
೧.	ಮೆ : ಮುದ್ದಕ್ಕನಹಳ್ಳಿ ಸ್ಟೋನ್ ಕಟ್ಟರ್ಸ್ ಕೊ. ಅ. ಸೊ. ಲಿ.,	ದಿನಾಂಕ ೨೮-೧೨-೧೯೮೪ರಿಂದ ೫ ವರ್ಷ ಅವಧಿ	೯.೨೦ ಎಕರೆ
೨.	ಮೆ : ಅಗರ್‌ವಾಲ್ ಇನ್‌ವೆಸ್ಟ್‌ಮೆಂಟ್ ಕಂಪನಿ	ದಿನಾಂಕ ೯-೫-೧೯೮೪ರಿಂದ ೫ ವರ್ಷ ಅವಧಿಗೆ	೧೨.೦೦ ಎಕರೆ
೩.	ಮೆ : ಶ್ರೀ ಕೆ. ಮಾಧವನ್	ದಿನಾಂಕ ೩-೧೨-೧೯೮೩ರಿಂದ ೧೦ ವರ್ಷ ಅವಧಿಗೆ	೦.೫೨ ಎಕರೆ
೪.	ಮೆ : ಶ್ಯಾಮಲ್ಸಾ ಗಿರಿಧಾರಿ ಮಿನರಲ್ಸ್ ಕಂಪನಿ.	ದಿನಾಂಕ ೧೦-೯-೧೯೮೬ರಿಂದ ೧೦ ವರ್ಷ ಅವಧಿಗೆ,	೧.೨೦ ಎಕರೆ

ಆ) ಗೊತ್ತಿದೆ.